

## ದೆಹಲಿ ಎನ್ನುವ ವಿಷಾನಿಲದ ಪೆಟ್ಟಿಗೆ

ಇತ್ತೀಚಿನ ವರ್ಷಗಳಲ್ಲಿ ರಾಷ್ಟ್ರ ರಾಜಧಾನಿ ದೆಹಲಿ ವಾಯುಮಾಲಿನ್ಯದ ಕಾರಣದಿಂದಾಗಿ ಮತ್ತೆ ಮತ್ತೆ ಸುದ್ದಿಯಲ್ಲಿದೆ. 2024ರಲ್ಲಂತೂ ದೆಹಲಿಯ ಮಾಲಿನ್ಯ ಅಂತರರಾಷ್ಟ್ರೀಯ ಗಮನಸೆಳೆಯಿತು. ದೆಹಲಿಯ ಕೆಲವು ಪ್ರದೇಶಗಳಲ್ಲಿ ಎಕ್ಯೂಐ ಮಟ್ಟ ಗರಿಷ್ಠ 500ರ ಅಂಚು ಮುಟ್ಟಿತ್ತು.

ದೆಹಲಿಯ ವಾಯು ಗುಣಮಟ್ಟ ತೀವ್ರ ಕುಸಿತ ಕಂಡಿದ್ದರೂ ಕಠಿಣವಾದ ಕ್ರಮಗಳನ್ನು ಜಾರಿಗೊಳಿಸುವಲ್ಲಿ ವಿಳಂಬ ಏಕಾಯಿತು ಎಂದು ದೆಹಲಿ ಸರ್ಕಾರವನ್ನು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿತು. 'ಗುಣಮಟ್ಟ ನಿಯಂತ್ರಿಸಲು ಈಗ ಜಾರಿಗೊಳಿಸಿರುವ ಕಠಿಣ ಕ್ರಮಗಳನ್ನು ಸಡಿಲಗೊಳಿಸಲು ಅನುಮತಿಸುವುದಿಲ್ಲ. ಈ ಸಂಬಂಧ ನನ್ನ ಪೂರ್ವಾನುಮತಿ ಇಲ್ಲದೆ ಕ್ರಮ ತೆಗೆದುಕೊಳ್ಳಬಾರದು' ಎಂದು ತಾಕೀತು ಮಾಡಿತು.

## ಸ್ವತಂತ್ರ ಭಾರತದಲ್ಲಿ ಮುಖ್ಯಮಂತ್ರಿ ಸೆರೆ

ಅಬಕಾರಿ ಹಗರಣಕ್ಕೆ ಸಂಬಂಧಿಸಿದಂತೆ ದೆಹಲಿ ಮುಖ್ಯಮಂತ್ರಿಯಾಗಿದ್ದ ಅರವಿಂದ್ ಕೇಜ್ರಿವಾಲ್ ಅವರನ್ನು 'ಜಾರಿ ನಿರ್ದೇಶನಾಲಯ' (ಇ.ಡಿ.) ಮಾರ್ಚ್ 21ರಂದು ಬಂಧಿಸಿತು. ಚುನಾಯಿತ ಸರ್ಕಾರದ ಮುಖ್ಯಮಂತ್ರಿಯೊಬ್ಬರು ಸ್ವತಂತ್ರ ಭಾರತದಲ್ಲಿ ಬಂಧನಕ್ಕೊಳಗಾದ ಮೊದಲ ಪ್ರಕರಣವಿದು. ಇ.ಡಿ. ಮತ್ತು ಸಿಬಿಐಗಳ ಬಂಧನ–ಬಿಡುಗಡೆಯ ಕಣ್ಣಾಮುಚ್ಚಾಲೆಗಳ ನಡುವೆ, ಸೆಪ್ಟೆಂಬರ್ 13ರಂದು ಕೇಜ್ರಿವಾಲ್ ಅವರಿಗೆ ಸುಪ್ರೀಂ ಕೋರ್ಟ್ ಜಾಮೀನು ನೀಡಿತು. ಜನತಾ ನ್ಯಾಯಾಲಯದ ತೀರ್ಪು ಬಯಸಿರುವ ಕೇಜ್ರಿವಾಲ್ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರಿಂದಾಗಿ, ಆಮ್ ಆದ್ಮಿ ಪಕ್ಷದ ಆತಿಶಿ ದೆಹಲಿಯ ಎಂಟನೇ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ. 2025ರ ಫೆಬ್ರುವರಿಯಲ್ಲಿ ನಡೆಯಲಿರುವ ಚುನಾವಣೆಯವರೆಗೆ ದೆಹಲಿಯ ಮುಖ್ಯಮಂತ್ರಿಯಾಗಿ ತಾವು ಕಾರ್ಯ ನಿರ್ವಹಿಸಲಿದ್ದು, ಚುನಾವಣೆಯಲ್ಲಿ ಪಕ್ಷ ಗೆಲುವು ಸಾಧಿಸಿದ ನಂತರ ಕೇಜ್ರಿವಾಲ್ ಮತ್ತೆ ಮುಖ್ಯಮಂತ್ರಿ ಆಗಲಿದ್ದಾರೆ ಎಂದು ಆತಿಶಿ ಹೇಳಿದ್ದಾರೆ.

ಭ್ರಷ್ಟಾಚಾರ ಪ್ರಕರಣವೊಂದರಲ್ಲಿ ಆರೋಪಕ್ಕೆ ಸಿಲುಕಿ, ಜಾರ್ಖಂಡ್‌ನ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಹೇಮಂತ್ ಸೊರೇನ್ ಅವರು ಕೂಡ 'ಜಾರಿ ನಿರ್ದೇಶನಾಲಯ'ದಿಂದ ಬಂಧನಕ್ಕೊಳಗಾದ ವರ್ಷವಿದು. ಜನವರಿ 31ರಂದು ಬಂಧನಕ್ಕೊಳಗಾದ ಹೇಮಂತ್, ಜೂನ್ 28ರಂದು ಜಾಮೀನಿನ ಮೇಲೆ ಬಿಡುಗಡೆಯಾದರು. ಜುಲೈ 3ರಂದು ಜಾರ್ಖಂಡ್ ಮುಖ್ಯಮಂತ್ರಿಯಾಗಿ ಮತ್ತೆ ಪ್ರಮಾಣವಚನ ಸ್ವೀಕರಿಸಿದರು.





## ಅದಾನಿಗೆ ಲಂಚದ ಕಳಂಕ

ಉದ್ಯಮಿಯೊಬ್ಬರ ನೈತಿಕ ಪ್ರಭೆಯ ರೂಪದಲ್ಲಿ ರತನ್ ಟಾಟಾ ಅವರ ಸಾವನ್ನು ನೋಡಿದರೆ, ಉದ್ಯಮಿಯ ಅನೈತಿಕತೆಯ ರೂಪದಲ್ಲಿ ಅದಾನಿ ಬಳಗಕ್ಕೆ ಸಂಬಂಧಿಸಿದ ಲಂಚ ಪ್ರಕರಣದ ಆರೋಪವನ್ನು ಗಮನಿಸಬಹುದು. ಭಾರತದಲ್ಲಿ ಸೌರಶಕ್ತಿಯಿಂದ ವಿದ್ಯುತ್ ಉತ್ಪಾದಿಸುವ ಯೋಜನೆಗಳ ಗುತ್ತಿಗೆಯನ್ನು ಪಡೆಯಲು ಅಧಿಕಾರಿಗಳಿಗೆ 25 ಕೋಟಿ ಡಾಲರ್‌ಗಳಷ್ಟು (ಅಂದಾಜು ₹2,100 ಕೋಟಿ) ಲಂಚ ನೀಡಿದ್ದಾರೆ ಇಲ್ಲವೆ ನೀಡಲು ಮುಂದಾಗಿದ್ದಾರೆ ಎಂದು ಗೌತಮ್ ಅದಾನಿ ಹಾಗೂ ಅವರ ಅಣ್ಣನ ಮಗ ಸಾಗರ್ ಅದಾನಿ ವಿರುದ್ಧ ಅಮೆರಿಕದ ಕೋರ್ಟ್‌ಗೆ ಆರೋಪಪಟ್ಟಿ ಸಲ್ಲಿಸಲಾಗಿದೆ. ಅವರ ಬಂಧನಕ್ಕೆ ಕೋರ್ಟ್ ವಾರಂಟ್ ಜಾರಿಗೊಳಿಸಿದೆ. ಕಳೆದ ವರ್ಷ, ಶಾರ್ಟ್ ಸೆಲ್ಲರ್ ಸಂಸ್ಥೆ 'ಹಿಂಡನ್‌ಬರ್ಗ್ ರಿಸರ್ಚ್' ಮಾಡಿದ ಆರೋಪಗಳಿಂದಲೂ ಅದಾನಿ ಸಮೂಹ ಹಿನ್ನಡೆ ಅನುಭವಿಸಿತ್ತು.